**ಓ.ಎಸ್. ನಂ.76/2019** **ಡಿ.ಡಬ್ಲ್ಯೂ- 2**

<u>ಸಾಕ್ಷಿಯನ್ನು ದಿನಾಂಕ **10.2.2023** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಪ್ರತಿವಾದಿ ವಾದಿ ಪರ ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

ನಾನು ಮತ್ತು ಪ್ರತಿವಾದಿ ಸಂಬಂಧಿಕರು ಎಂದರೆ ಸರಿ. ಈ ದಾವೆಯನ್ನು ವಾದಿಯು ಪ್ರತಿವಾದಿಯ ಮೇಲೆ ಹೂಡಿರುತ್ತಾರೆ. ದಾವಾಸ್ವತ್ತು ಸರ್ವೆ ನಂ.231 ಇರಬೇಕು, ಆದರೆ ನಿಖರವಾಗಿ ನನಗೆ ಗೊತ್ತಿರುವುದಿಲ್ಲ. ಏನು ಪರಿಹಾರ ಕೋರಿ ಈ ದಾವೆಯನ್ನು ಹೂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯ ತಂದೆ ಹೆಸರು ನೈನಾಗೌಂಡರ್ ಎಂದರೆ ಸರಿ. ಅವರು ಪಡುವನಕೋಟೆ ಗ್ರಾಮಸ್ಥರು, ಈಗ ಊರಿನಲ್ಲಿರುತ್ತಾರೆ. ಪಡುವನಕೋಟೆ ಗ್ರಾಮದಲ್ಲಿ ವಾದಿ ತಂದೆ ನೈನಾಗೌಂಡರ್ ಹೊರತುಪಡಿಸಿ ಬೇರೆ ನೈನಾಗೌಂಡರ್ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಗೆ ಮುತ್ತುಸ್ವಾಮಿ ಮತ್ತು ಕಾಳಿಯಣ್ಣನ್ ಎಂಬ ಎರಡು ಹೆಸರುಗಳು ಇರುತ್ತದೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರಿದು ದಾಖಲೆಯಲ್ಲಿ ಕಾಳಿಯಣ್ಣನ್ ಎಂದು ಇರುತ್ತದೆ. ಆಧಾರಕಾರ್ಡನಲ್ಲಿ ಕಾಳಿಯಣ್ಣನ್ ಎಂದು ನಮೂದಾಗಿರುತ್ತದೆ. ಅದನ್ನು ಹೊರತುಪಡಿಸಿ ನಾನು ಬೇರೆ ದಾಖಲೆಯನ್ನು ನೋಡಿರುವುದಿಲ್ಲ.

ದಾವಾಸ್ವತ್ತು ಮುತ್ತುಸ್ವಾಮಿ ಎಂಬುವವರಿಗೆ ದರಕಾಸ್ತು ಮೂಲಕ ಬಂದಿರುತ್ತದೆ. ಸದರಿ ಸ್ವತ್ತನ್ನು ಪ್ರತಿವಾದಿಗೆ ಮುತ್ತುಸ್ವಾಮಿ ರವರು ನೀಡಿ ಅವರ ಗ್ರಾಮಕ್ಕೆ ಹೋಗಿರುತ್ತಾರೆ.

3-4 ತಿಂಗಳುಗಳ ಹಿಂದೆ ನಾನು ವಡಿವೇಲು ಎಂಬುವವರನ್ನು ಕರೆದುಕೊಂಡು ಬಂದು ವಾದಿಯ ವಕೀಲರ ಮನೆಗೆ ಹೋಗಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ವಾದಿ ಪರ ವಕೀಲರು ಪ್ರತಿವಾದಿ ಮಗನನ್ನು ಮನೆಗೆ ಕರೆದುಕೊಂಡು ಬರುವುದು ತಪ್ಪು ಎಂದು ಹೇಳಿರುತ್ತಾರೆ ಎಂದರೆ ಸರಿ. ಈ ದಾವೆ ವಿಚಾರವನ್ನು ಮಾತನಾಡಲು ನಾನು ಬಂದಿರುತ್ತೇನೆ ಎಂದರೆ ಸರಿ. ನಾನು ವಕೀಲರ ಸಹಾಯ ಪಡೆದುಕೊಳ್ಳಲು ಅವರ ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸುಮಾರು 10 ವರ್ಷವಿದ್ದಾಗ ಮುತ್ತುಸ್ವಾಮಿ ರವರು ಪ್ರತಿವಾದಿ ಮನೆಗೆ ಬಂದಿರುತ್ತಾರೆ. ಆತನಿಗೆ ಸುಮಾರು 25 ವರ್ಷವಾಗುವವರೆಗೂ ಆತ ಪ್ರತಿವಾದಿ ಮನೆಯಲ್ಲಿದ್ದರು. ನಾನು ಹೇಳುವ ಮುತ್ತುಸ್ವಾಮಿ ವಾದಿಯಾಗಿರುತ್ತಾನೆ ಎಂದರೆ ಸರಿಯಲ್ಲ.

ಮುತ್ತುಸ್ವಾಮಿಯ ಯಾವುದೇ ಭಾವಚಿತ್ರ ಇರುವುದಿಲ್ಲ. ದಾವಾಆಸ್ತಿ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸಾಗುವಳಿ ಮೂಲಕ ಬಂದಿರುತ್ತದೆ ಎನ್ನುವರು. ನಾನು ಹೇಳುವ ಮುತ್ತುಸ್ವಾಮಿ ವಾದಿಯಾಗಿರುತ್ತಾನೆ, ಆತ ನೈನಾಗೌಂಡರ್ ಮಗನಾಗಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮನೆಯಲ್ಲಿದ್ದ ಮುತ್ತುಸ್ವಾಮಿ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯ ಸಂಬಂಧಿಕನಾದ ಕಾರಣಕ್ಕೆ ನಾನು ಪ್ರತಿವಾದಿ ಪರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.